B-18

ಶ್ರೀಶಾನುದಾಸ ಗ್ರನ್ಥಮಾಲಾ-55 ❁ ಸ್ತೋತ್ರ ಶಾಖೆ-12

ಶ್ರೀ ವರವರಮುನೀತ ಪ್ರಣೀತಂ

ಶ್ರೀ ದೇವಾಧಿರಾಜ ಮಂಗಲಾಶಾಸನಂ

ಕಾಂಚ್ಯಾಂ ಶ್ರೀ ಹಸ್ತಿ ಶೈಲಾಗ್ರೇ
ಕ್ಷೇತ್ರೇ ಸತ್ಯವ್ರತೇ ಶುಭೇ|



ಪುತ್ರಾರ್ಥಂ ಪುಣ್ಯಕೋಟ್ಯಂತಃ
ಪ್ರಾದುರ್ಭೂತಾಯ ಮಂಗಳಂ ||

ಕನ್ನಡ ಲಿಪಿಯಲ್ಲಿ ಮೂಲ ಮತ್ತು ಅನುವಾದಗಳೊಡನೆ

ಅನುವಾದಕ - ಸಂಪಾದಕ :- ಆ. ನ. ಶ್ರೀನಿವಾಸೈಯಂಗಾರ್

ಶ್ರೀ ಗೋದಾಮಂದಿರಂ, ಬೆಂಗಳೂರು-3.

Funding: IKS/Tattva Heritage and IKS-MoE. Digitization: eGangotri.

ಶ್ರೀಮತೇ ರಾಮಾನುಜಾಯನಮಃ

ಶ್ರೀ ದೇವಾಧಿರಾಜ ಮಂಗಳಾಶಾಸನಂ

ತನಿಪದ್ಯಗಳು

ಶ್ರೀ ಶೈಲೇಶ ದಯಾಪಾತ್ರಂ ಧೀ ಭಕ್ತ್ಯಾದಿ ಗುಣಾರ್ಣವಮ್
ಯತೀಂದ್ರ ಪ್ರವಣಂ ವಂದೇ ರಮ್ಯಜಾಮಾತರಂ ಮುನಿಮ್ ...1

ತಿರುಮಲೈಯಾಳ್ವಾರ್ (ಶ್ರೀ ಶೈಲಾರ್ಯರು) ಎಂಬ ತಿರುವಾಯ್ಮೊಳಿ ಪಿಳ್ಳೈ ಎಂಬ ಆಚಾರ್ಯರ ಕೃಪೆಗೆ ಪಾತ್ರರಾದ ಶಮದಮಾದಿ ಜ್ಞಾನಭಕ್ತಿ ವೈರಾಗ್ಯಗಳೆಂಬ ಪ್ರಪನ್ನರಿಗೆ ಭೂಷಣವಾದ ಗುಣಗಳಿಂದ ತುಂಬಿರುವ, ಶ್ರೀ ರಾಮಾನುಜಾಚಾರ್ಯರಲ್ಲಿ ಅತ್ಯಂತ ಭಕ್ತಿಯುಳ್ಳ, ಅಳಹಿಯ ಮಣವಾಳನ್, ಎಂಬ ಶ್ರೀರಂಗರಾಜನ ಹೆಸರಿನಿಂದ ಬೆಳಗುವ, ಶ್ರೀ ವರವರ ಮುನಿಗಳನ್ನು (ಮಣವಾಳಮಾಮುನಿಗಳನ್ನು) ನಮಿಸುತ್ತೇನೆ ಮತ್ತು ಸ್ತುತಿಸುತ್ತೇನೆ.

ಯಶ್ಶಕ್ರೇ ದೇವರಾಜಸ್ಯ ಮಂಗಳಾಶಾಸನಂ ಮುದಾ
ತಂ ವನ್ದೇ ರಮ್ಯಜಾಮಾತೃಮುನಿಂ ವಿಶದವಾಗ್ವರಮ್ ...2

ಶ್ರೀ ಕಾಂಚೀಪುರದ ದೇವದೇವನಾದ ಶ್ರೀ ವರದರಾಜಸ್ವಾಮಿಯವರಿಗೆ ಮಂಗಳಾಶಾಸನ ಪದ್ಯ ಮಾಲೆಯನ್ನು ಸಂತೋಷದಿಂದ ರಚಿಸಿದ ವಿಶದವಾಕ್ ಶಿಖಾಮಣಿಗಳಾದ ಶ್ರೀ ವರವರಮುನಿಗಳಿಗೆ ನಮಿಸುತ್ತೇನೆ.

ಯಸ್ಯ ಪ್ರಸಾದಕಲಯಾ ಬಧಿರಃ ಶೃಣೋತಿ
ಪಂಗುಃ ಪ್ರಧಾವತಿ ಜವೇನ ಚ ವಕ್ತಿ ಮೂಕಃ
ಅಂಧಃ ಪ್ರಪಶ್ಯತಿ ಸುತಂ ಲಭತೇ ಚ ವಂಧ್ಯಾ
ತಂ ದೇವದೇವಮೇವ ವರದಂ ಶರಣಂ ಪ್ರಪದ್ಯೇ

ಎಂದು ಶ್ರೀಯಾಮುನಾಚಾರ್ಯರು (ಆಳವಂದಾರ್) ಕಾಂಚೀ ವರದರಾಜ ಸ್ವಾಮಿಯಲ್ಲಿ ಶ್ರೀ ಭಾಷ್ಯ ಕಾರರಿಗಾಗಿ ಪ್ರಪತ್ತಿ ಮಾಡಿದರು ಎಂಬ ಶ್ರೀಗುರುಪರಂಪರಾ ಐತಿಹ್ಯವನ್ನು ಇಲ್ಲಿ ನೆನೆಯಬೇಕು. ಯಾರಅನುಗ್ರಹದಿಂದ ಕಿವುಡನು ಕೇಳುವನೋ, ಹೆಳವನು ಓಡುವನೋ, ಮೂಗನು ವೇಗವಾಗಿ ಮಾತನಾಡುವನೋ, ಕುರುಡನು ಚೆನ್ನಾಗಿ ನೋಡುವನೋ, ಬಂಜೆಯು ಮಗನನ್ನು ಹೆರುವಳೋ ಆ ದೇವತೆಗಳ ದೇವತೆಯಾದ, ಪರದೇವತೆಯಾದ, ದೇವರಾಜ ಸ್ವಾಮಿಯನ್ನು ನಾನು ಶರಣವಾಗಿ ವರಿಸುತ್ತೇನೆ. ಎಂದು ಈ ಪದ್ಯದ ತಾತ್ಪರ್ಯ. 'ವೇಂಡಿತ್ತೆಲ್ಲಾಂ ತರುಂ ಕೋದಿಲ್ ಎನ್ ವಳ್ಳಲ್' ಎಂಬ ತಿರುವಾಯ್ಮೊಳಿಯ ಶ್ರೀ ಸೂಕ್ತಿಯೂ ವಿಷ್ಣುಃ ವರಿಷ್ಠೋ ವರದೋ ವರೇಣ್ಯಃ" ಎಂಬ ಶ್ರೀ ವಿಷ್ಣುಪುರಾಣದ ಶ್ರೀ ಸೂಕ್ತಿಯೂ ಇಲ್ಲಿ ಅನುಸಂಧೇಯ.

ವಾಜಿಮೇಧೇ ವಪಾಹೋಮೇ ಧಾತುರುತ್ತರವೇದಿತಃ
ಉದಿತಾಯ ಹುತಾಶಾತ್ [illegible]ಯಾಸ್ತು ಮಂಗಳಮ್.. 2

ಬ್ರಹ್ಮನ ಅಶ್ವಮೇಧಯಾಗದಲ್ಲಿ ಪ್ರಜ್ವಲಿಸುತ್ತಿರುವ ಅಗ್ನಿಯಲ್ಲಿ ಆತನು ಕುದುರೆಯ ವಪೆಯನ್ನು ಶಾಸ್ತ್ರೋಕ್ತವಾಗಿ ಹೋಮ ಮಾಡಿದಾಗ ಉತ್ತರವೇದಿಯಲ್ಲಿ ಅವತರಿಸಿದ, ಸುಂದರವಾದ ಅಂಗಗಳಿಂದ ಕಂಗೊಳಿಸುವ, ಶ್ರೀ ವರದರಾಜಸ್ವಾಮಿಗೆ ಮಂಗಳವಾಗಲಿ

ಪ್ರವೇಶ : "ಶೆನ್ದಮಿಳುಂ ವಡಕಲೈಯುಂ ತಿಕಳನ್ದನಾವರ್" ಎಂಬ ತಿರುಮಂಗೈಯಾಳ್ವಾರ್ ಶ್ರೀಸೂಕ್ತಿಯಂತೆ ಉಭಯವೇದಾನ್ತ ಶಾಸ್ತ್ರ ತಾತ್ಪರ್ಯಗಳನ್ನು ಬಹಳ ಸರಳವಾಗಿ ಎಲ್ಲರಿಗೂ ತಿಳಿಯುವಂತೆ ಉಪದೇಶಿಸುಸ್ತದ್ಧ ಶ್ರೀ ಭಾಷ್ಯಕಾರರ ದರ್ಶನದ ರಹಸ್ಯಾರ್ಥಗಳನ್ನು ಪರಮ ಕೃಪೆಯಿಂದ ವಿವರಿಸಿ ಉಪಕರಿಸಿದ, ಶ್ರೀ ವರವರ ಮುನಿಗಳವರ ಸಂಸ್ಕೃತ ಕೃತಿಗಳು ನಾಲ್ಕು :—

ಯತಿರಾಜವಿಂಶತಿ, ದಿವ್ಯದೇಶಿ ಮಂಗಲಾಶಾಸನಂ, ದೇವಾಧಿರಾಜ ಮಂಗಲಾ ಶಾಸನಂ ಮತ್ತು ಯತಿರಾಜ ಮಂಗಲಾಶಾಸನಂ. ಇವುಗಳಲ್ಲಿ ಮೂರನೆಯದಾದ ಶ್ರೀರಾಮಾನುಜಾಚಾರ್ಯರ ಆರಾಧ್ಯದೇವತೆಯಾದ, ಆಶ್ರಿತಾರ್ಥ ಹರಿದಾನದೀಕ್ಷಿತನಾದ ಶ್ರೀ ಕಾಂಚೀವರದ ರಾಜ ಸ್ವಾಮಿಯ ಮಂಗಲಾಶಾಸನವನ್ನು (ತಾತ್ಪರ್ಯದೊಡನೆ) ಕನ್ನಡಿಗರಿಗೆ ಪರಿಚಯ ಮಾಡಿಕೊಡಲು ಈ ಪ್ರಯತ್ನ ಮಾಡಿದೆ.

ಮಂಗಲಂ ವೇಧಸೇ ಮೇದಿ ಮೇದಿನೀಗೃಹಮೇಧಿನೇ

ವರದಾಯ ದಯಾಧಾಮ್ನೇ ಧೀರೋಧಾರಾಯ ಮಂಗಲಮ್ .. 1

ಚತುರ್ಮುಖ ಬ್ರಹ್ಮನು ಆದಿಕೃತ ಯುಗದಲ್ಲಿ ಭಗವಂತನಅಪ್ಪಣೆಯಂತೆ ಸತ್ಯವ್ರತ ಕ್ಷೇತ್ರವೆಂಬ ಕಾಂಚೀನಗರದಲ್ಲಿ ಅಶ್ವಮೇಧಯಾಗವನ್ನು ಮಾಡಿದನು. ಆ ಯಾಗಶಾಲೆಯಲ್ಲಿ ಉತ್ತರ ವೇದಿಯಲ್ಲಿ ಭಗವಂತನು ಆವಿರ್ಭವಿಸಿದನು. "ವರದಪುಯು ದಯಂ ತ್ವಾಂ ವೃದೇ" ಎಂದು ಶ್ರೀ ಕೂರೇಶರು ಹಾಡಿರುವಂತೆ 'ಪೇರರುಳಾಳನ್' ಪರಮಕೃಪಾಳು "ಎಂದು ಪ್ರಸಿದ್ಧನಾದ, ಆ ಧೀರೋಧಾರನಾದ ಮತ್ತು ದಯಾನಿಧಿಯಾದ ದೇವರಾಜನಿಗೆ ಮಂಗಳವಾಗಲಿ

ಯಜಮಾನಂ ವಿಧಿಂ ವೀಕ್ಷ್ಯ ಸ್ಮಯಮಾನ ಮುಖಶ್ರಿಯೇ
ದಯಮಾನದೃಶೇ ತಸ್ಮೈ ದೇವರಾಜಾಯ ಮಂಗಳಮ್ ...3

ತಾನು ಹೇಳಿದಂತೆ ಅಶ್ವಮೇಧ ಯಾಗವನ್ನು ಮಾಡುತ್ತಿದ್ದ ಬ್ರಹ್ಮನನ್ನು ಅಕ್ಕರೆಯಿಂದ ನೋಡುತ್ತಾ ನಗುತ್ತಿದ್ದ, ಸುಂದರವಾದ ಮುಖದಿಂದ ಕಂಗೊಳಿಸುವ, ಕರುಣೆಯಿಂದ ತುಂಬಿದ ಕಂಗಳಿಂದ ಬೆಳಗುತ್ತಿರುವ ದೇವರಾಜ ಸ್ವಾಮಿಗೆ ಮಂಗಳವಾಗಲಿ.

ವಾರಿದ ಶ್ಯಾಮವಪುಷೇ ವಿರಾಜತ್ಪೀತವಾಸಸೇ
ವಾರಣಾಚಲವಾಸಾಯ ವಾರಿಜಾಕ್ಷಾಯ ಮಂಗಳಮ್ .. 4

ಮಳೆಮುಗಿಲಿನಂತೆ ಕಪ್ಪಾಗಿರುವ (ಕಂಡವರ ತಾಪವನ್ನೂ ಆರ್ತಿಯನ್ನೂ ಪರಿಹರಿಸುವ), ಪೀತಾಂಬರದಿಂದ ಹೊಳೆಯುತ್ತಿರುವ, ಅಷ್ಟದಿಗ್ಗಜಗಳು ಬಂದು ಪೂಜಿಸುತ್ತಿದ್ದುದರಿಂದ "ಶ್ರೀ ಹಸ್ತಿಗಿರಿ" ಎಂದು ಪ್ರಸಿದ್ಧವಾಗಿರುವ "ವಾರಣಾಚಲ"ದಲ್ಲಿ ನೆಲೆಸಿರುವ, ಪುಂಡರೀಕಾಕ್ಷನಾದ ಪುರುಷೋತ್ತಮನಿಗೆ ಮಂಗಳವಾಗಲಿ.

ತಸ್ಯ ಮಹಾರಜತಂ ವಾಸಃ, "ಕಪ್ಯಾಸಂ ಪುಂಡರೀಕಮೇವ —
ಮಕ್ಷಿಣೀ", ಎಂಬ ಶ್ರುತಿಗಳು ಇಲ್ಲಿ ಅನುಸಂಧೇಯ.

ಅದ್ಯಾಪಿ ಸರ್ವಭೂತಾನಾಂ ಅಭೀಷ್ಟಫಲದಾಯಿನೇ
ಪ್ರಣತಾರ್ತಿಹರಾಯಾಸ್ತು ಪ್ರಭವೇ ಮಮ ಮಂಗಳಂ .. 5

ಈಗಲೂ 'ಕೂಡ ಎಲ್ಲ ಜೀವಿಗಳಿಗೂ ಅವರವರು ಬಯಸಿದ ಫಲಗಳನ್ನು ಕೊಡುತ್ತಿರುವ, ತನಗೆ ನಮಸ್ಕಾರ ಮಾಡಿದವರ (ತನ್ನ ಭಕ್ತರ) ಕ್ಲೇಶವನ್ನು ಕಳೆಯುವ, ಸರ್ವಲೋಕೈಕನಾಥನಾದ, ನನ್ನ ಪ್ರಭುವಾದ, ವರದರಾಜ ಸ್ವಾಮಿಗೆ ಮಂಗಳವಾಗಲಿ.

"ಅರ್ಥಿಕಲ್ಪಕ, ಆಪತ್ಸಖ : ಪ್ರಣತಾರ್ತಿಹರ" ಎಂಬ ಗದ್ಯತ್ರಯದ ಶ್ರೀ ಸೂಕ್ತಿಗಳು ಇಲ್ಲಿ ಅನುಸಂಧೇಯ."

"ಅಹಂ ಹಿ ಸರ್ವಯಜ್ಞಾನಾಂ ಭೋಕ್ತಾಚ ಪ್ರಭುರೇವಚ ಎಂಬ ಗೀತಾ ಸೂಕ್ತಿಗೆ ಭಾಷ್ಯದಲ್ಲಿ ಫಲಪ್ರದಾನ ಸಮರ್ಥನೆಂದೇ ಅರ್ಥ ಮಾಡಿದೆ, "ಅಖಿಲಜಗತ್ ಸ್ವಾಮಿನ್, ಅಸ್ಮತ್ ಸ್ವಾಮಿನ್ ಎಂಬ ಶ್ರೀ ಸೂಕ್ತಿಗಳನ್ನನುಸರಿಸಿ "ಪ್ರಭವೇ ಮಮ ಮಂಗಲಮ್" ಎಂದು ಹಾಡಿದ್ದಾರೆ.

ದಿವ್ಯಾವಯವಸೌಂದರ್ಯ ದಿವ್ಯಾಭರಣ ಹೇತಯೇ
ಧನ್ತಾವಲ ಗಿರೀಶಾಯ ದೇವರಾಜಾಯ ಮಂಗಲಮ್ .. 6

ಅಪ್ರಾಕೃತವಾದ, ಪಂಚೋಪನಿಷನ್ಮಯವಾದ, ದಿವ್ಯಮಂಗಲವಿಗ್ರಹದಿಂದಲೂ, ದೇವಭೋಗ್ಯವಾದ – ದಿವ್ಯಸೂರಿಗಳು ಅನುಭವಿಸುತ್ತಿರುವ ಅವಯವಗಳ ಸೌಂದರ್ಯದಿಂದಲೂ, ದಿವ್ಯಾಭರಣಗಳಿಂದಲೂ, ದಿವ್ಯಾಯುಧಗಳಿಂದಲೂ ಕೂಡಿ ಕಂಗೊಳಿಸುತ್ತಿರುವ, ಶ್ರೀ ಕಾಂಚೀ ಪುರದ ಶ್ರೀಹಸ್ತಿ. ಶೈಲ ಶಿಖರದಲ್ಲಿ ಪಾರಿಜಾತದಂತೆ ಬೆಳಗುತ್ತಿರುವ, ಶ್ರೀ ದೇವರಾಜಸ್ವಾಮಿಗೆ ಮಂಗಳವಾಗಲಿ ಶರಣಾಗತಿ ಗದ್ಯದಲ್ಲಿ ಬರುವ "ಅಖಿಲೇತ್ಯಾದಿ" ಇಲ್ಲಿ ಅನುಸಂಧೇಯ

ಪುರುಷಾಯ ಪುರಾಣಾಯ ಪುಣ್ಯಕೋಟಿ ನಿವಾಸಿನೇ
ಪುಷ್ಪಿತೋದಾರಕಲ್ಪದ್ರುಕಮನೀಯಾಯ ಮಂಗಲಮ್ .. 7

“ ತಂ ಮೇರು ಶಿಖರೇ ಸಕ್ತತೋಯಮಿವ ತೋಯದಂ

ಎಂಬ ವಾಲ್ಮೀಕಿಯ ಶ್ರೀ ಸೂಕ್ತಿ ಇಲ್ಲಿ ಅನುಸಂಧೇಯ. ಗರುಡನು ಸುಪರ್ಣ ತ್ರಯೀ ಮಯ ವೇದ ಶಿಖರದಲ್ಲಿ ರಾರಾಜಿಸುವ ಉಪನಿಷತ್ತುಗಳಿಂದ ಪ್ರತಿಪಾದ್ಯನಾದ ದೇವತೆ ದೇವರಾಜನೆಂದು ಇದರಿಂದ ಸೂಚಿತವಾಗುತ್ತದೆ. “ ಓದಿಯ ವೇದತ್ತಿನುಳ್ ಪೊರುಳಾಯ್ ಅದನುಚ್ಚಿಮಿಕ್ಕಶೋದಿಯೈ ನಾಥನ್” ಎಂಬ ತಿರುವರಂಗತ್ತಮುದನಾರ್ ಅವರ ಶ್ರೀಸೂಕ್ತಿ ಇಲ್ಲಿ ಅನುಸಂಧೇಯ.

ಭೋಗಾಪವರ್ಗಯೋರೇಕಂ ವಾಂಛದ್ಭ್ಯೋ ದದತೇ ದ್ವಯಂ
ಶ್ರೀಮದ್ವರದರಾಜಾಯ ಮಹೋದಾರಾಯ ಮಂಗಳಂ ..: 9 :

ಪುರುಷಾರ್ಥಗಳು ನಾಲ್ಕು : — ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಇವುಗಳಲ್ಲಿ ಮೊದಲನೆಯ ಮೂರೂ ಭೋಗ ಸಾಧನಗಳು. ಐಹಿಕ ಸುಖ ಸಂಪತ್ತಿಗೆ ಆಧಾರವಾಗಿವೆ. ಈ ಮೂರಕ್ಕೆ ‘ತ್ರಿವರ್ಗ” ವೆಂದು ಹೆಸರು. ನಾಲ್ಕನೆಯದಾದ ಮೋಕ್ಷಕ್ಕೆ “ಅಪವರ್ಗ” ವೆಂದು ಹೆಸರು. ಭೋಗ ಮತ್ತು ಅಪವರ್ಗಗಳಲ್ಲಿ ಒಂದನ್ನು ಬಯಸಿದವರಿಗೆ ಶ್ರೀ ವರದರಾಜಸ್ವಾಮಿ ಅವೆರಡನ್ನೂ ಕೊಡುತ್ತಾನೆ. ಅಂತಹ ಶ್ರೀ ದೇವಿಯ ರಮಣನಾದ, ಪರಮೋದಾರನಾದ, ವರಪ್ರದರಲ್ಲಿ ಶ್ರೇಷ್ಠನಾದ ದೇವರಾಜಸ್ವಾಮಿಗೆ ಮಂಗಳವಾಗಲಿ. “ವರಂತರುಂ ಮಾಮಣಿವಣ್ಣನ್” ಎಂಬ ತಿರುಮಂಗೈಯಾಳ್ವಾರ್ ಶ್ರೀ ಸೂಕ್ತಿ ಇಲ್ಲಿ ಅನುಸಂಧೇಯ.

ಮತಂ ಗಜಾದ್ರಿ ಶೃಂಗಾಗ್ರ ಶೃಂಗ ಶೃಂಗಾರ ವರ್ಷ್ಮಣೇ
ಮಹಾಕೃಪಾಯ ಮದ್ರಕ್ಷಾದೀಕ್ಷಿತಾಯಸ್ತು ಮಂಗಳಂ ..: 10

Funding: IKS/Tattva Heritage and IKS-MoE. Digitization: eGangotri.

ಪುರುಷ ಸೂಕ್ತ ಪ್ರತಿಪಾದ್ಯನಾದ, ಎಲ್ಲಾ ಜನರ ಹೃದಂತದಲ್ಲಿ ನೆಲೆಸಿ ಅವರ ಬಯಕೆಗಳನ್ನರಿತು, ಅದನ್ನು ಅವರಿಗೆ ಕೊಡುವ, (ಪುರುಷ) ಪರಮೋದಾರನಾದ, ಪುರಾಣ ಪುರುಷನಿಗೆ ಮಂಗಳವಾಗಲಿ "ನಮಸ್ತೇ ಪುರುಷಪೂರ್ವಜ" ಎಂಬ "ಜಿತನ್ತೇ" ಶ್ರೀಸೂಕ್ತ ಇಲ್ಲಿ ಅನುಸಂಧೇಯ.

ಶ್ರೀ ಕಾಂಚೀಪುರದಲ್ಲಿ ಶ್ರೀ ಹಸ್ತಿಗಿರಿಯಲ್ಲಿರುವ ಭಗವಂತನ ಮಂದಿರದ ಮೇಲ್ಭಾಗಕ್ಕೆ "ಪುಣ್ಯಕೋಟಿ" ಎಂದು ಹೆಸರು. ಶ್ರೀರಂಗದ ಪ್ರಣವಾಕಾರ ವಿಮಾನಕ್ಕೆ "ವೇದಶೃಂಗ" ವೆಂದೂ ಶ್ರೀ ವೆಂಕಟೇಶನ ವಿಮಾನಕ್ಕೆ "ಆನಂದನಿಲಯ" ವೆಂದೂ, ಮೇಲುಕೋಟೆ ಶ್ರೀ ಯದುಗಿರಿ ನಾರಾಯಣ ವಿಮಾನಕ್ಕೆ "ಆನಂದಮಯ" ವೆಂದೂ ಹೆಸರು. ಇದರಂತೆ ಶ್ರೀ ಪುಣ್ಯಕೋಟಿ ವಿಮಾನವನ್ನು ನೆಲೆಸಿರುವ, ಎಲ್ಲೆಲ್ಲೂ ಹೂ ಬಿಟ್ಟಿರುವ ಕಲ್ಪವೃಕ್ಷದಂತೆ ಕಂಗೊಳಿಸುವ, ದಿವ್ಯವಾದ [illegible] ಆಯುಧಗಳಿಂದ ಜಾಜ್ವಲ್ಯಮಾನನಾಗಿಯೂ ಇರುವ, ಅತ್ಯಂತ ಸುಂದರವಾದ [illegible], ಶ್ರೀ ವರದರಾಜಸ್ವಾಮಿಯವರಿಗೆ ಮಂಗಳವಾಗಲಿ.

ಕಾಂಚನಾಚಲ ಶೃಂಗಾಗ್ರ [illegible]
ಸುಪರ್ಣಾಂಸ [illegible] ಸುಂದರಾಂಗಂ [illegible] 8 :

ಮೇರುಗಿರಿಯ ಶಿಖರದ ಮೇಲೆ ಕಂಗೊಳಿಸು[illegible]ವಂತೆ ಬೆಳಗುವ ಗರುಡನ ತೋಳಿನ ಮೇಲೇರಿ ಕುಳಿತು ದರ್ಶನವನ್ನು [illegible] ಸಕಲ ದೇವತಾ ಸಾರ್ವಭೌಮನಾದ, ದೇವರಾಜ ಸ್ವಾಮಿಗೆ ಮಂಗಳವಾಗಲಿ. [illegible]ತ್ವ, ಶೇಷಶಾಯಿತ್ವ ಮತ್ತು ಗರುಡ ವಾಹನತ್ವ ಇವು ಪರತತ್ವದ ಚಿಹ್ನೆಗಳು.

... 8

ವೇಗವತ್ಯುತ್ತರೇ ತೀರೇ ಪುಣ್ಯಕೋಟ್ಯಾಂ ಹರಿಃ ಸ್ವಯಂ
ವರದಃ ಸರ್ವ ಭೂತಾನಾಂ ಅದ್ಯಾಪಿ ಪರಿದೃಶ್ಯತೇ

ಎಂಬ ಪ್ರಮಾಣದಂತೆ ಶ್ರೀ ಕಾಂಚೀಪುರದಲ್ಲಿ ಹಸ್ತಿಗಿರಿಯ ಶಿಖರದ ತುದಿಯಲ್ಲಿ ಪರಮಕೃಪೆಯಿಂದ ನನ್ನನ್ನು ನನ್ನಂತಹ ಎಲ್ಲರನ್ನೂ ರಕ್ಷಿಸಲು ಸಂಕಲ್ಪಿಸಿ ನೆಲೆಸಿರುವ, ಅತ್ಯಂತ ಸುಂದರವಾದ ರೂಪವನ್ನುಳ್ಳ ಭಕ್ತಾನುಗ್ರಹ ದೀಕ್ಷಿತನಾದ, ದಯಾನಿಧಿಯಾದ, ಶ್ರೀ ದೇವರಾಜಸ್ವಾಮಿಗೆ ಮಂಗಳವಾಗಲಿ.

ಶ್ರೀ ಕಾಂಚೀಪೂರ್ಣ ಮಿಶ್ರೇಣ ಪ್ರೀತ್ಯಾ ಸರ್ವಾಭಿಭಾಷಿಣೇ
ಅತೀತಾರ್ಚಾವ್ಯವಸ್ಥಾಯ ಹಸ್ತ್ಯದ್ರೀಶಾಯ ಮಂಗಳಂ ... 11

ಶ್ರೀ ಆಳವಂದಾರ್ ಪ್ರಶಿಷ್ಯರಾದ ಶ್ರೀ ರಾಮಾನುಜರಿಗೆ ಪ್ರಿಯಸಖರಾದ "ಗಜೇಂದ್ರದಾಸ" ರೆಂಬ ತಿರುಕ್ಕಚ್ಚಿನಂಬಿ (ಶ್ರೀ ಕಾಂಚೀಪೂರ್ಣ) ಎಂಬ ಭಾಗವತೋತ್ತಮರೊಡನೆ ಅವರು ಬೀಸಣಿಗೆಯನ್ನು ಬೀಸುತ್ತಾ ಭಗವಂತನ ಆಯಾಸವನ್ನು ಪರಿಹರಿಸುತ್ತಿದ್ದಾಗ ಅರ್ಚಾವತಾರದ ನಿಯಮವನ್ನು ಮೀರಿ ಅತ್ಯಾದರದಿಂದ ಸಂಭಾಷಣೆ ಮಾಡುತ್ತಿದ್ದ ಶ್ರೀಹಸ್ತಿಗಿರಿ ನಾಥನಿಗೆ ಮಂಗಳವಾಗಲಿ. "ಪೇಶುಂ ಪೆರುಮಾಳ್ (ಮಾತಾಡುವ ದೇವರು) ಎಂದು ಶ್ರೀ ಕಾಂಚೀಪುರದ ದೇವರಾಜಸ್ವಾಮಿಗೆ ಹೆಸರು. ಹಾಗೆಯೇ ಮೇಲುಕೋಟೆಯ ಶ್ರೀ ಭಾಷ್ಯಕಾರರಿಗೆ "ಪೇಶುಂ ಯತಿರಾಜರ್" ಎಂದು ಹೆಸರು ಪ್ರಸಿದ್ಧಿಯಾಗಿದೆ. ಶ್ರೀ ರಾಮಾನುಜಾಚಾರ್ಯರಿಗೆ ಯಾವ ಸಂಶಯಗಳು ಬಂದರೂ ಅದನ್ನು ಅವರು ಅದನ್ನು ಕಾಂಚೀಪೂರ್ಣರಿಗೆ ತಿಳಿಸುತ್ತಿದ್ದರು. ಇದನ್ನು ಭಗವಂತನಿಗೆ ನಿವೇದಿಸಿ ಆತನ ...10

Funding: IKS/Tattva Heritage and IKS-MoE. Digitization: eGangotri.

ಮನೋಗತವನ್ನು ತಿಳಿದು ಹೇಳಿರಿ ಎಂದು ಬಿನ್ನವಿಸುತ್ತಿದ್ದರು. ಆರು ಸೂಕ್ತಿಗಳನ್ನು ಶ್ರೀ ವರದರಾಜನು ಕಾಂಚೀಪೂರ್ಣರ ಮೂಲಕ ತಿಳಿಸಿ "ವೈದಿಕೋತ್ತಮ ಸಿದ್ಧಾಂತ ಸಂರಕ್ಷಣ ಧುರಂಧರನಾದನು" ಹಾಗೆಯೇ ಯಜ್ಞಮೂರ್ತಿಯೊಡನೆ ವಾದ ಮಾಡುವಾಗ ಯತಿರಾಜರ ಕನಸಿನಲ್ಲಿ ಬಂದು "ಸಿದ್ಧಿ ತ್ರಯದ" ಆಧಾರದಿಂದ ಅದ್ವೈತವನ್ನು ಖಂಡಿಸಲು ಹೇಳಿದ್ದನಲ್ಲಾ, ಶ್ರೀ ಯಾದವ ಪ್ರಕಾಶರ ತಾಯಿಗೆ ಕಾಂಚೀಪೂರ್ಣರ ಮೂಲಕ ಅವರು ಶ್ರೀ ರಾಮಾನುಜರನ್ನು ಆಶ್ರಯಿಸುವಂತೆ ಹೇಳಿದ್ದನಲ್ಲಾ ಇಲ್ಲಿ ಸೂಚಿಸಬಹುದು.

ಅಸ್ತು ಶ್ರೀ ಸ್ತನಕಸ್ತೂರೀ ವಾಸನಾವಾಸಿತೋರಸೇ
ಶ್ರೀ ಹಸ್ತಿಗಿರಿನಾಥಾಯ ದೇವರಾಜಾಯ ಮಂಗಲಂ ... 12

"ಶ್ರೀ ವತ್ಸವಕ್ಷಾಃ ನಿತ್ಯಶ್ರೀಃ" ಎಂಬ ಶ್ರೀ ರಾಮಾಯಣದ ವಾಣಿಯಂತೆ, "ಮಲರಾಳ್ ತನತ್ತುಳ್ಳಾನ್" ಎಂಬ ಪೇಯಾಳ್ವಾರ್ ಶ್ರೀ ಸೂಕ್ತಿಯಂತೆ, "ಮಹಾದೇವಿ" ಪೆರುಂದೇವೀ ಎಂಬ ಶ್ರೀ ದೇವಿಯು ಎದೆಯಲ್ಲಿ ಧರಿಸಿರುವ ಕಸ್ತೂರೀ, ಕೇಸರೀ, ಗಂಧ ಪಚ್ಚಕರ್ಪೂರಗಳಿಂದ ಕೂಡಿರುವ ದಿವ್ಯಾಂಗರಾದ ವಾಸನೆಯಿಂದ ಪರಿಮಳಿಸುತ್ತಿರುವ ವಕ್ಷಃ ಸ್ಥಲವುಳ್ಳ ಶ್ರೀಮಂತನಾದ, ಶ್ರೀಹಸ್ತಿಗಿರಿಯ ಒಡೆಯನಾದ ಶ್ರೀ ದೇವರಾಜ ಸ್ವಾಮಿಗೆ ಮಂಗಲವಾಗಲಿ.

ಕಾತ್ವನ್ಯಾತ್ವಾಮೃತೇ ದೇವಿ ಸರ್ವಯಜ್ಞ ಮಯಂವಪುಃ
ಅಧ್ಯಾಸ್ತೇ ದೇವದೇವಸ್ಯ ಯೋಗಿಚಿಂತ್ಯಗದಾಭೃತಃ

ಎಂಬ ಶ್ರೀ ವಿಷ್ಣು ಪುರಾಣದ ಶ್ರೀ ಸೂಕ್ತಿಯೇ ಈ ಶ್ಲೋಕಕ್ಕೆ ಆಧಾರ. ಹೀಗೆಯೇ ಮಹಾತ್ಮರಾದ ಋಷಿಮುನಿ ಕವಿಗಳ ಶ್ರೀ ಸೂಕ್ತಿಗಳಿಂದ ಈ ಮಂಗಳಾಶಾಸನ ಕೃತಿ ಪ್ರಚೋದಿತ

ಮಂಗಲಾಶಾಸನ ಪರೈರ್ಮದಾಚಾರ್ಯ ಪುರೋಗಮೈಃ :
ಸರ್ವೈಶ್ಚ ಪೂರ್ವೈರಾಚಾರ್ಯೈಃ ಸತ್ಕೃತಾಯಾಸ್ತು ಮಂಗಳಂ·

ಮಂಗಲಾಶಾಸನ ಸ್ವರೂಪಾನು ರೂಪವೆಂದು ಶ್ರೀರಾಮಾಯಣದಿಂದ ಸುವ್ಯಕ್ತವಾಗುತ್ತದೆ· ಆದುದರಿಂದ ನಮ್ಮಾಳ್ವಾರ್ ಪೆರಿಯಾಳ್ವಾರ್ ಮತ್ತು ಇತರ ಆಳ್ವಾರುಗಳನ್ನೂ , ಶ್ರೀ ವಾಲ್ಮೀಕಿ ಮುನಿಗಳನ್ನೂ ಅನುಸರಿಸಿನವರು ಹಿಂದಿನ ಆಚಾರ್ಯರೆಲ್ಲರೂ ಭಗವಂತನಿಗೆ ಮಂಗಳಾಶಾಸನವನ್ನು ಮಾಡಿದ್ದಾರೆ· ಅವರೆಲ್ಲರೂ ಮನಸಾರ ಆಚರಿಸಿ, .ಪೂಜಿಸಿ, ಸತ್ಕರಿಸಿದ ದೇವರಾಜನಿಗೆ ಮಂಗಳವಾಗಲಿ ಎಂದು ಕೊನೆಯ ಪದ್ಯದಲ್ಲಿ ಶ್ರೀ ವರ ವರಮುನಿಗಳು ಹಾಡಿ ಈ ಮಂಗಲಾಶಾಸನ ಕೃತಿಯನ್ನು ಮುಗಿಸುತ್ತಾರೆ·

ಅ·ನ· ಶ್ರೀನಿವಾಸೈಯಂಗಾರ
ಅನುವಾದಕ – ಸಂಪಾದಕರು : ಶ್ರೀಶಾನುದಾಸ ಗ್ರಂಥಮಾಲಾ

ಬೆಂಗಳೂರು

ಶ್ರೀ ಗೋದಾಮಂದಿರಂ,
34–42, ಒಂಬತ್ತನೇ ಅಡ್ಡ ರಸ್ತೆ,
[illegible] ಬಡಾವಣೆ,
[illegible]
ಬೆಂಗಳೂರು – 560 003·

ದೂರವಾಣಿ : 368362·

०००००००

ತಿರುನಾರಾಯಣ ಪುರಂ,
ಮೇಲುಕೋಟೆ – 57431·
ತಾರೀಖು 27–10–[illegible]

ಪ್ರಭವೇ ತು.. ತುಲಾ ಮಾಸಂ·
ಪಂಚಮಿ ಗುರುವಾಸರಃ

"ವಿಶದವಾಕ್ ಶಿಖಾಮಣಿ" — "ಯತೀಂದ್ರ ಪ್ರವಣ"
ಬಿರುದಾಂಕಿತೈಃ ಶ್ರೀ ವರವರಮುನಿಭಿಃ ಅನುಗೃಹೀತಂ

ಶ್ರೀ ದೇವಾಧಿರಾಜ ಮಂಗಲಾಶಾಸನಂ

(ಕರ್ನಾಟಕ ಭಾಷಾ ತಾತ್ಪರ್ಯ ಸಹಿತಂ)

ಶ್ರೀಶಾನುದಾಸ ಗ್ರಂಥಮಾಲಾ
ಶ್ರೀ ಗೋದಾಮಂದಿರಂ,
34/44, ಒಂಬತ್ತನೇ ಅಡ್ಡರಸ್ತೆ
ಮಲ್ಲೇಶ್ವರಂ, ಬೆಂಗಳೂರು-3

ಶ್ರೀ ಜೀಯರ್ ತಿರುನಕ್ಷತ್ರಂ,
ಶ್ರೀವರವರಮುನಿಜಯನ್ತ್ಯೈ,
ಪ್ರಭವೇ ತುಲಾಯಾಂ ಮೂಲಂ
27-10-1987

ಬೆಲೆ : ರೂ. 2.50